ಓ:ಎಸ್:ನಂ.*182/2019*

*ಪಿ.ಡಬ್ಲ್ಯೂ- 1*

***ದಿಃ 14-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎ ವಕೀಲರಿಂದ***

ದಾವ ಐಟಂ "ಎ" ಷೆಡ್ಯೂಲ್ ಸ್ವತ್ತಿನಲ್ಲಿ *2* ಎಕರೆ *18* ವರೆ ಎಕರೆ ಎಂದು ನಮೂದಾಗಿದೆ ಎಂದರೆ ಸರಿ. ದಾವ "ಎ" ಷೆಡ್ಯೂಲ್ ಸ್ವತ್ತನ್ನು ನಾನು ಅಳತೆ ಮಾಡಿಸಿರುತ್ತೇನೆ. ದಾವ ಐಟಂ " ಬಿ" ಮತ್ತು "ಸಿ" ಷೆಡ್ಯೂಲ್ ಐಟಂ ನಂ "ಎ" ಷೆಡ್ಯೂಲ್ ನ ಭಾಗ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. "ಬಿ" ಷೆಡ್ಯೂಲ್ ಸ್ವತ್ತಿನ *20* ಇಂಟು *28* ಅಡಿಗಳಿಗೆ ಸಂಬಂಧಪಟ್ಟಂತೆ ಜಂಜರ್ ನಂ.*286* ಕ್ಕೆ ಸಂಬಂಧಪಟ್ಟಂತೆ ಹಲಸೂರು ಗ್ರಾಮ ಪಂಚಾಯಿತಿಯವರು ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿದ್ದಾರೆಂದರೆ ಸರಿಯಲ್ಲ. *1996-97* ನೇ ಸಾಲಿಗಿಂತ ಪೂರ್ವದಲ್ಲಿ ಮೇಲ್ಕಂಡ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸದರಿ ಆಸ್ತಿಗೆ ಕಂದಾಯ ಕಟ್ಟಿ ಸದರಿ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿಯಲ್ಲ. ದಾವ "ಸಿ" ಷೆಡ್ಯೂಲ್ ಗೆ ಸಂಬಂಧಪಟ್ಟಂತೆ *20* ಇಂಟು *15* ಅಡಿಗೆ ಸಂಬಂಧಪಟ್ಟಂತೆ ಹಲಸೂರು ಗ್ರಾಮ ಪಂಚಾಯಿತಿಯವರು ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿದ್ದಾರೆಂದರೆ ಸರಿಯಲ್ಲ. ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯು ಗ್ರಾಮ ಪಂಚಾತಿಗೆ ಕಿಮ್ಮತ್ತನ್ನು ಪಾವತಿ ಮಾಡಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯು ದಾವ "ಬಿ" ಷೆಡ್ಯೂಲ್ ಮತ್ತು "ಸಿ" ಷೆಡ್ಯೂಲ್ ಸ್ವತ್ತಿನಲ್ಲಿ ಕುಲುಮೆಯನ್ನು ನಡೆಸುತ್ತಿದ್ದಾರೆಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***